25	ಗದಗ	53	0	0	53
26	ಹಾವೇರಿ	74	0	0	74
27	ಉತ್ತರ ಕನ್ನಡ	58	0	20	38
28	ಗುಲ್ಬರ್ಗಾ	109	0	0	109
29	ಯಾದಗಿರಿ	39	0	0	39
30	ಬಳ್ಳಾರಿ	90	0	29	61
31	ರಾಯಚೂರು	92	2	46	44
32	ಕೊಪ್ಪಳ	70	0	70	0
33	ಬೀದರ್	81	5	64	12
	ಒಟ್ಟು	**2299**	**12**	**385**	**1902**

ಸಹಿ/-

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಕರ್ನಾಟಕ ವಿಧಾನ ಸಭೆ

315 ಶ್ರೀ ಮಂಜುನಾಥ್ ಹೆಚ್.ಪಿ. (ಹುಣಸೂರು)

ಇಂಧನ ಸಚಿವರು.

ಅ) ಮೈಸೂರು ಜಿಲ್ಲೆಯ ಹುಣಸೂರು ತಾಲ್ಲೂಕಿನ ಗಾವಡಗೆರೆ ಹಾಗೂ ಹೊಸೂರುನಲ್ಲಿ 66 ಕೆ.ವಿ ಸಾಮರ್ಥ್ಯದ ವಿದ್ಯುತ್ ವಿತರಣಾ ಉಪ ಕೇಂದ್ರ ಮತ್ತು ಹುಣಸೂರು ಉಪ ವಿಭಾಗ ಹಾಗೂ ಕೊಡಗು ಜಿಲ್ಲೆಯಲ್ಲಿ ಸಮರ್ಪಕ ವಿದ್ಯುತ್ ಪೂರೈಕೆಗಾಗಿ ಹುಣಸೂರು ಪಟ್ಟಣದ ಹೊರವಲಯದ ಕಲ್ಲುಬೆಟ್ಟದ ಪಕ್ಕದಲ್ಲಿ 220 ಕೆ.ವಿ. ಸಾಮರ್ಥ್ಯದ ವಿದ್ಯುತ್ ಸ್ವೀಕರಣ ಕೇಂದ್ರಗಳು ಈ ಹಿಂದಿನ ಸಾಲುಗಳಲ್ಲಿ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ;

ಹೌದು.

ಆ) ಹಾಗಿದ್ದಲ್ಲಿ, ಯೋಜನೆಗಳ ಮಂಜೂರಾತಿಗೆ ಸಂಬಂಧಿಸಿದಂತೆ ವಿವರಣೆ (ಆದೇಶ ಸಂಖ್ಯೆ, ಮಂಜೂರಾದ ಅನುದಾನ, ಟೆಂಡರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ) ನೀಡಲಾಗುವುದೇ;

1. ಈ ಯೋಜನೆಗಳಿಗೆ ಒಟ್ಟು 50.41 ಕೋಟಿ ರೂ. ಅಂದಾಜು ವೆಚ್ಚದಲ್ಲಿ ಅನುಮೋದನೆ ನೀಡಲಾಗಿದೆ.

2. 66 ಕೆ.ವಿ. ಗಾವಡಗೆರೆ ಉಪ ವಿದ್ಯುತ್ ಕೇಂದ್ರದ ಕಾಮಗಾರಿಗಳನ್ನು 2009–10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.
3. 66 ಕೆ.ವಿ. ಹೊಸೂರು ಉಪ ವಿದ್ಯುತ್ ಕೇಂದ್ರದ ಕಾಮಗಾರಿಗಳನ್ನು 2009–10ರ ಸಾಲಿನಲ್ಲಿ ಕಐಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.
4. ಹುಣಸೂರು ಸಮೀಪ ಕಲ್ಲುಬೆಟ್ಟದ 220 ಕೆ.ವಿ. ಸ್ವೀಕರಣಾ ಕೇಂದ್ರದ ಕಾಮಗಾರಿಯನ್ನು 2009–10ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಇ) ಹಾಲಿ ಈ ಯೋಜನೆಗಳು ನೆನೆಗುದಿಗೆ ಬಿದ್ದಿದ್ದು (ಪ್ರಕ್ರಿಯೆ ಸ್ಥಗಿತಗೊಂಡಿದ್ದು), ಚಾಲನೆ ನೀಡಲು ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸುವುದು?

ಈ ಯೋಜನೆಗಳ ಕಾಮಗಾರಿಗಳನ್ನು 2009–10 ರ ಸಾಲಿನಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

ಸಂಖ್ಯೆ: ಇಎನ್ 21 ಪಿಪಿಎಂ 2009

(ಕೆ.ಎಸ್. ಈಶ್ವರಪ್ಪ)
ಇಂಧನ ಸಚಿವರು.

ಕರ್ನಾಟಕ ವಿಧಾನ ಸಭೆ

316 ಶ್ರೀ ಸುರೇಶ್ ಬಾಬು ಸಿ.ಬಿ (ಚಿಕ್ಕನಾಯಕನಹಳ್ಳಿ)

ಅ) ತುಮಕೂರು ಜಿಲ್ಲೆಯ ಯಾವ ಯಾವ ತಾಲ್ಲೂಕುಗಳ ಗ್ರಾಮಗಳಲ್ಲಿ ಫ್ಲೋರೈಡ್‌ಯುಕ್ತ ನೀರು ಕಂಡು ಬಂದಿರುತ್ತದೆ;

ತುಮಕೂರು ಜಿಲ್ಲೆಯ ಎಲ್ಲಾ ತಾಲ್ಲೂಕುಗಳ ಕೆಲವು ಕುಡಿಯುವ ನೀರಿನ ಜಲಮೂಲಗಳಲ್ಲಿ ಫ್ಲೋರೈಡ್‌ಯುಕ್ತ ಕಲುಷಿತ ನೀರಿರುವುದು ಕಂಡು ಬಂದಿದೆ.

ಆ) ಫ್ಲೋರೈಡ್‌ಯುಕ್ತ ಮತ್ತು ನೈಟ್ರೇಟ್‌ಯುಕ್ತ ನೀರು ಬಳಸುವುದರಿಂದ ಆಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಸರ್ಕಾರವು ಯಾವ ರೀತಿಯ ನಿವಾರಣಾ ಕ್ರಮವನ್ನು ಕೈಗೊಂಡಿದೆ;

ಭೂಮಿಯ ಮೇಲ್ಮೈ ಜಲಮೂಲ ಆಧಾರಿತ ಪರ್ಯಾಯ ಕುಡಿಯುವ ನೀರಿನ ಯೋಜನೆಗಳನ್ನು ಅನುಷ್ಠಾನಗೊಳಿಸುವುದರ ಜೊತೆಗೆ 25 ಡಿ–ಫ್ಲೋರಿಡೇಶನ್ ಘಟಕಗಳನ್ನು ಈಗಾಗಲೇ ಅಳವಡಿಸಲಾಗಿದೆ. ಇದಲ್ಲದೆ, 4974